## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2018-19ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆ-3054-80-196-1-03-300 ಲಮ್‌ಸಮ್ ಅಡಿ ಧಾರವಾಡ ಜಿಲ್ಲೆ ಕುಂದಗೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನೀಡಿರುವ ಆದೇಶ

***

**ಪ್ರಸ್ತಾವನೆ:**

ಧಾರವಾಡ ಜಿಲ್ಲೆ ಕುಂದಗೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ: 3054-80-196-1-03-300ರಡಿ ರೂ. 200.00 ಲಕ್ಷಗಳ ಮೊತ್ತದಲ್ಲಿ ಕೈಗೋಳ್ಳಲು ಬಂದಿರುವ ಪ್ರಸ್ತಾವನೆಯನ್ನು ಗಮನಿಸಿದೆ.

ಮೇಲೆ ಓದಲಾದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಅನುಮೋದನೆ ನೀಡಿರುವ ಮೇರೆಗೆ 2018-19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ-3054-80-196-1-03-300 ಲಮ್‌ಸಮ್‌ರಡಿ ಒದಗಿಸಿದ ಅನುದಾನದ ಮಿತಿಯಲ್ಲಿ ಧಾರವಾಡ ಜಿಲ್ಲೆ ಕುಂದಗೋಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ರೂ. 200.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಆದೇಶ,

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:189/5:ಆರ್‌ಆರ್‌ಸಿ:2018, ಬೆಂಗಳೂರು, ದಿನಾಂಕ: 06.10.2018**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಧಾರವಾಡ ಜಿಲ್ಲೆ ಕುಂದಗೋಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೆಳಕಂಡ ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ-3054-80-196-1-03-300 ಲಮ್‌ಸಮ್ ಅಡಿ ರೂ. 200.00 ಲಕ್ಷಗಳ (ರೂಪಾಯಿಗಳು ಎರಡು ನೂರು ಲಕ್ಷ ಮಾತ್ರ) ಅನುದಾನದಲ್ಲಿ ಕೈಗೊಳ್ಳಲು ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಕುಂದಗೋಳ ತಾಲ್ಲೂಕಿನ ಹಿರೇನರ್ತಿ – ಚಾಕಲಬ್ಬಿ ರಸ್ತೆ ಸುಧಾರಣೆ 0.00 ದಿಂದ 6.00 ಕಿ.ಮೀವರೆಗೆ | 150.00 |
| 2 | ಹುಬ್ಬಳ್ಳಿ ತಾಲ್ಲೂಕಿನ ರಾಯನಾಳ – ಕಳಕನಮಡ್ಡಿ ರಸ್ತೆ ಸುಧಾರಣೆ 0.00 ದಿಂದ 2.00 ಕಿ.ಮೀವರೆಗೆ | 50.00 |
| | **ಒಟ್ಟು** | **200.00** |

ಷರತ್ತುಗಳು:

1. ಧಾರವಾಡ ಜಿಲ್ಲೆ ಕುಂದಗೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳನ್ನು ತುರ್ತು ಹಾಗೂ ಅಗತ್ಯತೆ ಆಧಾರದ ಮೇರೆಗೆ ಹಂಚಿಕೆ ಮಿತಿಗೊಳಪಟ್ಟು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನಗೊಳಿಸತಕ್ಕದ್ದು.

2. ಈ ಆದೇಶದಲ್ಲಿ ಅನುಮೋದಿಸಿರುವ ಕಾಮಗಾರಿಯನ್ನು ಜಿಲ್ಲಾ ಪಂಚಾಯತಿ/ಕೆಆರ್‌ಐಡಿಎಲ್, ಇತರೆ ಯೋಜನೆಯಡಿ/ಕಾರ್ಯಕ್ರಮದಡಿ/ ಲೆಕ್ಕ ಶೀರ್ಷಿಕೆಯಡಿ ಯಾವುದೇ ಕಾರಣಕ್ಕೂ ಪುನರಾವರ್ತನೆ ಯಾಗಿರುವುದಿಲ್ಲವೆಂಬ ಅಂಶವನ್ನು ದೃಢಪಡಿಸಿಕೊಳ್ಳತಕ್ಕದ್ದು.

3. ಕರ್ನಾಟಕ ಪಾರದರ್ಶಕತೆ ನಿಯಮ 4 ಜಿ ವಿನಾಯಿತಿ ಇಲ್ಲದಿದ್ದಲ್ಲಿ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕತೆ ಕಾಯಿದೆ ಪ್ರಕಾರ ಟೆಂಡರ್ ಕರೆದು ನಿರ್ವಹಿಸುವುದು.

4. ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ ಬಳಕೆಯಾದ ಹಣ ಕುರಿತಂತೆ ಮಾಹಿತಿಯನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ನೀಡುವುದು.

5. ಈ ಆದೇಶದಲ್ಲಿ ಅನುಮೋದಿಸಿರುವ ಕಾಮಗಾರಿಯ ಅಂದಾಜನ್ನು ನಿಯಮಾನುಸಾರ IRC ಮತ್ತಿತರೆ ತತ್ಸಮಾನ ತಾಂತ್ರಿಕ ನಿಬಂಧನೆಗಳಂತೆ ಪರಿಶೀಲನೆಗೆ ಒಳಪಡಿಸಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.

6. ಕಾಮಗಾರಿ ಪ್ರಾರಂಭಿಸುವ ಮುನ್ನ ಮತ್ತು ಮುಕ್ತಾಯದ ನಂತರ ರಸ್ತೆಯ ಸನ್ನಿವೇಶದ ಛಾಯಾ ಚಿತ್ರಗಳನ್ನು ತೆಗೆದು ವೆಬ್‌ಸೈಟ್ ನಲ್ಲಿ ಅಳವಡಿಸತಕ್ಕದ್ದು.

7. ಪ್ರಸ್ತುತ ಈ ಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿ ಅನುಷ್ಠಾನಗೊಳಿಸಿರುವ ಹೆಚ್ಚುವರಿ ರಸ್ತೆ ಕಾಮಗಾರಿಗಳನ್ನು Worksoft works monitoring ಪದ್ಧತಿ ಮುಖಾಂತರ ಉಸ್ತುವಾರಿ ಮಾಡಬೇಕಾಗಿದ್ದು, ಈ ಸಂಬಂಧ ಪೂರ್ಣ ಮಾಹಿತಿಯನ್ನು Worksoft website ನಲ್ಲಿ ತಪ್ಪದೇ ಅಳವಡಿಸತಕ್ಕದ್ದು.

8. ಕಾಮಗಾರಿಗಳ ಗುಣಮಟ್ಟ ಪರೀಕ್ಷೆಯನ್ನು ಕೆಆರ್‌ಆರ್‌ಡಿಎ ವತಿಯಿಂದ ನಿಗಧಿಪಡಿಸಿರುವ DQM/SQM ಗಳಿಂದ ಪರಿವೀಕ್ಷಣೆ ಮಾಡಿಸತಕ್ಕದ್ದು.

9. ಕಾಮಗಾರಿಗಳನ್ನು 3rd party /SQM/DQM ರವರಿಂದ ತಪಾಸಣೆಗೆ ಒಳಪಡಿಸತಕ್ಕದ್ದು.

10. 2014-15ನೇ ಸಾಲಿನಿಂದ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ, ಹಣ ಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಪಡೆಯಲಾದ ಪಾವತಿ ಆದೇಶವಿದ್ದಲ್ಲಿ ಮಾತ್ರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು ಕಡ್ಡಾಯವಾಗಿ ಮಾಡುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ

ಪಾಲಿಸುವಂತೆ ಈಗಾಗಲೇ ಸೂಚಿಸಲಾಗಿದೆ. ಅದರಂತೆ, ಪ್ರಸ್ತುತ ಈ ಆದೇಶದಲ್ಲಿ ಅನುಮೋದಿಸಿರುವ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವ ನಿಬಂಧನೆಗೊಳಪಡಿಸಿದೆ.

11. ಈ ಆದೇಶದಂತೆ ಜಿಲ್ಲಾ ಪಂಚಾಯತಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ತಾಲ್ಲೂಕುವಾರು ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆ ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ರವರ ಮುಖಾಂತರ ಸರ್ಕಾರಕ್ಕೆ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ.ಬೂವನಹಳ್ಳಿ ನಾಗರಾಜ್)
ನಿರ್ದೇಶಕರು, ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
7. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (PMU)(IF),2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು
8. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
9. ಪ್ರಧಾನ ಕಾರ್ಯದರ್ಶಿಗಳು(ಪಂರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಇಲಾಖೆ, ಬೆಂಗಳೂರು.
10. ವಿಶೇಷಾಧಿಕಾರಿಗಳು (ಜಿಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
13. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಟ್ರೆಜರಿ ಡಿಪಾರ್ಟ್‌ಮೆಂಟ್, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
14. ಅಧೀನ ಕಾರ್ಯದರ್ಶಿಗಳು (ವೆಚ್ಚ-6), ಜಿ.ಪಂ. ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
15. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು-9
16. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಧಾರವಾಡ ಜಿಲ್ಲಾ ಪಂಚಾಯತ್
17. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಧಾರವಾಡ
18. ಜಿಲ್ಲಾ ಖಜಾನಾಧಿಕಾರಿಗಳು, ಧಾರವಾಡ ಜಿಲ್ಲೆ.
19. ಮಾಹಿತಿ ಕೇಂದ್ರದ ಗಣಕ ಕೋಶ ಮುಖ್ಯಸ್ಥರು, ಗ್ರಾಅಪಂರಾ ಇಲಾಖೆ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಗ್ರೂಪ್ ಮೈಲ್ ನಲ್ಲಿ ರವಾನಿಸಲು ಸೂಚಿಸಿದೆ
20. ರಕ್ಷಾ ಕಡತ / ಹೆಚ್ಚುವರಿ ಪ್ರತಿ.